ಆ) ಉಡುಪಿ ಜಿಲ್ಲೆಗೆ ರೂ. 50.00 ಲಕ್ಷ ಬಿಡುಗಡೆ ಮಾಡಿದೆ.

ಇ) ರಾಜ್ಯದಲ್ಲಿ ಅತಿ ಹೆಚ್ಚು ಮಳೆಯಾಗುವ ಜಿಲ್ಲೆಗಳ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಜಿಲ್ಲೆ ಹೆಸರು	ಸರಾಸರಿ ಮಳೆ(ಮಿ.ಮಿ)
1	ಉಡುಪಿ	4119
2	ದಕಿಣ ಕನ್ನಡ	3975
3	ಉತ್ತರ ಕನ್ನಡ	2836
4	ಕೊಡಗು	2718
5	ಚಿಕ್ಕಮಗಳೂರು	1925
6	ಶಿವಮೊಗ್ಗ	1813
7	ಹಾಸನ	1031

733(987) ಶ್ರೀ ಗೋಪಾಲಕೃಷ್ಣ ಬೇಳೂರು.ಬಿ.ಕೆ (ಸಾಗರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜೋಗ ಜಲಪಾತಕ್ಕೆ ದಿನಂಪ್ರತಿ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಎಷ್ಟು:

ಆ) ಇದರಿಂದ ಪ್ರವಾಸೋದ್ಯಮಕ್ಕೆ ವಾರ್ಷಿಕ ಬರುವ ಆದಾಯ ಎಷ್ಟು:

ಇ) ಜೋಗ ಜಲಪಾತದ ವೈಭವ ದೃಶ್ಯವನ್ನು ವರ್ಷಪೂರ್ತಿ (ಯಾವಾಗಲೂ) ಶಾಶ್ವತವಾಗಿ ಇರುವಂತೆ ಉಳಿಸಿಕೊಳ್ಳಲು ಸರ್ಕಾರ ಯೋಜನೆಗಳನ್ನು ರೂಪಿಸಿದೆಯೇ:

ಈ) ಯಾವಾಗ ಇದರ ಯೋಜನೆಗಳನ್ನು ಸಿದ್ಧಪಡಿಸಲಾಗುವುದು:

ಉ) ಇದಕ್ಕಾಗಿ ಖರ್ಚಾಗುವ ಅಂದಾಜು ಮೊತ್ತ ಎಷ್ಟು:

ಊ) ಸದರಿ ಯೋಜನೆಯು ಜೋಗ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವುದೇ:

ಋ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರಗಳನ್ನು ಒದಗಿಸುವುದು)?

ಶ್ರೀ ಡಿ.ಟಿ.ಜಯಕುಮಾರ್ (ಪ್ರಾವಾಸೋದ್ಯಮ ಸಚಿವರು)

ಅ) ಜೋಗ್ ಜಲಪಾತಕ್ಕೆ ದಿನಂಪ್ರತಿ ಸರಾಸರಿ 1100 ರಿಂದ 1200ರವರೆಗೆ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ.

ಆ) ಜೋಗ್ ನಿರ್ವಹಣಾ ಪ್ರಾಧಿಕಾರವು ಜೋಗ್ ಜಲಪಾತದ ಪ್ರವೇಶ ಶುಲ್ಕದ ವಸೂಲಾತಿಯ ಜವಾಬ್ದಾರಿಯನ್ನು ದಿನಾಂಕ : 1–6–2004 ರಿಂದ ವಹಿಸಿಕೊಂಡಿದ್ದು, ದಿನಾಂಕ : 31–12–2004ರವರೆಗೆ ಒಟ್ಟು ರೂ.7,98,802–00 ಶುಲ್ಕವನ್ನು ಸಂಗ್ರಹಿಸಲಾಗಿದೆ.

ಇ) ಹೌದು

ಈ) ಜೋಗ್ ನಿರ್ವಹಣಾ ಪ್ರಾಧಿಕಾರದ ವತಿಯಿಂದ ಈಗಾಗಲೇ ಬಿಲ್ಡ್ ಓನ್, ಆಪರೇಟ್ ಅಂಡ್ ಟ್ರಾನ್ಸ್‌ಫರ್ (ಬೋಟ್)/ ಬಿಲ್ಡ್ ಓನ್, ಲೀಸ್ ಅಂಡ್ ಟ್ರಾನ್ಸ್‌ಫರ್ (ಬೋಲ್ಟ್) ಆಧಾರದ ಮೇಲೆ ಖಾಸಗಿ ಉದ್ಯಮಿಗಳಿಂದ Expression of Interest ಸಲ್ಲಿಸುವಂತೆ ರಾಷ್ಟ್ರಮಟ್ಟದ ಪತ್ರಿಕೆಯಲ್ಲಿ ದಿನಾಂಕ : 04–01–2005ರಲ್ಲಿ ಪ್ರಕಟಣೆ ಹೊರಡಿಸಲಾಗಿದೆ, ಸಲ್ಲಿಸುವ ಕೊನೆಯ ದಿನಾಂಕ:04–04–2005 ಆಗಿದೆ.

ಉ) ಪ್ರಸ್ತುತದಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಹೌದು

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

734(988) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ (ಸಾಗರ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾರ್ಗಲ್ ಕೋಗಾರ ಬೈಟ್ಯಾಕ್ ಸ್ಕೀಂನಡಿಯಲ್ಲಿ.

ಭಾಗದ ಜನರನ್ನು ಒಕ್ಕಲೆಬ್ಬಿಸಲು ಸರ್ಕಾರ ಪ್ರಯತ್ನಿಸುತ್ತಿದೆಯೇ;

ಆ) ಇದಕ್ಕೆ ಕಾರಣಗಳೇನು;

ಇ) ಇಲ್ಲಿ ಏನಾದರೂ ಯೋಜನೆಗಳನ್ನು ರೂಪಿಸಲು ಸರ್ಕಾರ ನಿರ್ಧರಿಸಿರುವುದೇ ಹಾಗೂ ಯೋಜನೆಯ ವಿವರ ತಿಳಿಸುವುದು;

ಈ) ಈ ಹಿಂದೆ ಇಲ್ಲಿನ ಜನರಿಗೆ ಭೂಮಿಯ ಹಕ್ಕುಪತ್ರ ನೀಡಿ, ಈ ಯೋಜನೆಗಾಗಿ ಭೂಮಿ ವಶಪಡಿಸಿಕೊಳ್ಳುವಾಗ ಅವರುಗಳಿಗೆ ಭೂ ಪರಿಹಾರವನ್ನು ನೀಡದಿರುವುದು ನಿಜವೇ;

ಉ) ಪರಿಹಾರವನ್ನು ಏಕೆ ನೀಡುತ್ತಿಲ್ಲ ಇಲ್ಲಿರುವ ಕುಟುಂಬಗಳೆಷ್ಟು ಹಾಗೂ ಎಷ್ಟು ಭೂಮಿಯನ್ನು ವನ್ಯ ಜೀವಿ ಯೋಜನೆಗಾಗಿ ಗುರುತಿಸಲಾಗಿದೆ;

ಊ) ಇಂತಹ ಫಲಾನುಭವಿ ಕುಟುಂಬಗಳಿಗೆ ಯಾವ ರೀತಿಯ ಪರಿಹಾರ ನೀಡಲಾಗುವುದು ಮತ್ತು ಪರಿಹಾರ ಮೊತ್ತ ಎಷ್ಟು;

ಋ) ಹಕ್ಕು ಪತ್ರ ಇಲ್ಲದ ಕುಟುಂಬಗಳನ್ನು ಯಾವ ರೀತಿ ಪರಿಗಣಿಸಲಾಗುವುದು (ವಿವರ ನೀಡುವುದು);

ಋಋ) ಅಕ್ರಮವಾಗಿ ಇಲ್ಲಿಂದ ಒಕ್ಕಲೆಬ್ಬಿಸುವ ಕ್ರಮವನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಶರಾವತಿ ಅಭಯಾರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕಾರ್ಗಲ್ ಕೋಗಾರ್ ಗ್ರಾಮಗಳಲ್ಲಿ ಬರುವ ಖಾಸಗಿ ಜಮೀನನ್ನು ಅವರ ಸ್ವಇಚ್ಛೆಯಿಂದ ಸರ್ಕಾರಕ್ಕೆ ನೀಡಲು ಬಯಸಿದಲ್ಲಿ ಅದನ್ನು ಖರೀದಿಸುವ ವಿಷಯ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಆ) ಭಾರತ ಸರ್ಕಾರದ ಅರಣ್ಯ ಪರಿಸರ ಮಂತ್ರಾಲಯವು ರಾಷ್ಟ್ರೀಯ ವನ್ಯ ಜೀವಿ ಕ್ರೀಯಾ ಯೋಜನೆಯೊಂದನ್ನು (National Wildlife Action Plan-2002-2016) ಹೊರಡಿಸಿದೆ. ಈ ಯೋಜನೆಯಡಿಯಲ್ಲಿ ರಕ್ಷಿತ ಪ್ರದೇಶಗಳ ಅಭಿವೃದ್ಧಿ ಹಾಗೂ ಅದರ ಜಾಲವನ್ನು ಬಲಪಡಿಸುವ ನಿಟ್ಟಿನಲ್ಲಿ ಸ್ವಇಚ್ಛೆಯಿಂದ ವನ್ಯಧಾಮಗಳಿಂದ ಸ್ಥಳಾಂತರ ಹೊಂದಲು ಹಾಗೂ ಪುನರ್ವಸತಿ ಮುಖಾಂತರ ಅನುಷ್ಟಾನಗೊಳಿಸುವ ಒಂದು ಕಾಲಬದ್ಧ ಕಾರ್ಯಕ್ರಮ ಸದರಿ ಯೋಜನೆಯ ಒಂದು ಅಂಶವಾಗಿದೆ.

ಇ) ಈ ಹಿನ್ನೆಲೆಯಲ್ಲಿ ಈಗಾಗಲೇ ಉದ್ಘೋಷಣೆ ಮಾಡಲಾಗಿರುವ ರಾಷ್ಟ್ರೀಯ ಉದ್ಯಾನವನ